ಓ ಎಸ್ ನಂ. 41/2016
ಪಿ ಡಬ್ಲ್ಯೂ: 1
ದಿನಾಂಕ 17-02-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು: ಪ್ರತಿವಾದಿ ಪರ: ಶ್ರೀ ಕೆ ಎಸ್ ಆರ್ ವಕೀಲರಿಂದ:</u>

ಎಲ್ ಸಿ ರವೀಂದ್ರಕುಮಾರ್ ಇವರಿಗೆ ಈ ಕೇಸನ್ನು ಹಾಕುವ ಮೊದಲು ಕ್ರಯಪತ್ರವನ್ನು ನೊಂದಣಿ ಮಾಡಿಕೊಡುವಂತೆ ನೋಟೀಸು ಕಳುಹಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಕ್ರಯದ ಆದಾರದ ಮೇಲೆ ವಿನಯ್ ಬಾಬುರವರಿಗೆ ನೊಂದಣಿ ಮಾಡಿಕೊಡುವಂತೆ ನೋಟೀಸು ನೀಡಿರುತ್ತೇನೆ. ಅಸೆಸ್ಮೆಂಟ್ ನಂ.1977/1 ಮತ್ತು 1914/1 ಕ್ಕೆ ಸಂಬಂದಪಟ್ಟಂತೆ ಕರಾರುಪತ್ರವಾಗಿರುತ್ತದೆ. ಅಸೆಸ್ಮೆಂಟ್ ನಂ.1977/3 ನ್ನು ಕರಾರುಪತ್ರ ಬರೆದುಕೊಟ್ಟಿಲ್ಲವಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಂಬರು ಇದ್ದಿರಬಹುದು ಎಂದು ನುಡಿದಿರುತ್ತಾರೆ.

ಅಸೆಸ್ಮೆಂಟ್ ನಂ.1977/1 ಮತ್ತು 1914/1 ರ ಚಕ್ಕುಬಂದಿಯನ್ನು ಹೇಳಲು ಸಾದ್ಯವಿದೆಯಾ ಎಂಬ ಪ್ರಶ್ನೆಗೆ ನನಗೆ ಕರಾರು ಆದ ಆಸ್ತಿಯ ಚಕ್ಕುಬಂದಿಯನ್ನು ಹೇಳಬಲ್ಲೆ ಎನ್ನುತ್ತಾರೆ. ಪೂರ್ವಕ್ಕೆ ಸಣ್ಣತಿಮ್ಮಯ್ಯ ಮತ್ತು ಬೀರಪ್ಪ ರವರ ಆಸ್ತಿ, ಪಶ್ಚಿಮಕ್ಕೆ ಕೆ ಎಂ ರಸ್ತೆ, ಉತ್ತರಕ್ಕೆ ಬೀರಪ್ಪರವರ ಆಸ್ತಿ ಮತ್ತು ದಕ್ಷಿಣಕ್ಕೆ ಯಶೋಧಮ್ಮನವರ ಆಸ್ತಿ ಇರುತ್ತದೆ. ಅಸೆಸ್ಮೆಂಟ್ ನಂ.1977/3 ಮತ್ತು 1914/3 ರ ಚಕ್ಕುಬಂದಿಯನ್ನು ನನಗೆ ಹೇಳಲು ಸಾಧ್ಯವಿಲ್ಲ. ಸಾಕ್ಷಿ ಮುಂದುವರೆದು ಪೇಪರ್ ನೋಡಿ ಹೇಳಬಲ್ಲೆ ಎಂದು ನುಡಿದಿರುತ್ತಾರೆ. ಅಸೆಸ್ಮೆಂಟ್ ನಂ.1977/3 ಮತ್ತು 1914/3 ರ ಆಸ್ತಿ ಅಸ್ತಿತ್ವದಲ್ಲಿ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಇರಬಹುದು, ನನಗೆ ಕರಾರು ಮಾಡಿದ ಆಸ್ತಿಯ ಬಗ್ಗೆ

ಮಾತ್ರ ನನಗೆ ಗೊತ್ತು ಎಂದು ನುಡಿದಿರುತ್ತಾರೆ. ದಾವಾ ಆಸ್ತಿಗಳ ಮೂಲ ಪತ್ರಗಳನ್ನು ನಾನು ನೋಡಿದ್ದೇನೆ. ದಾವಾ ಆಸ್ತಿಗಳ ಖಾತೆ ಎಲ್ ಸಿ ರವೀಂದ್ರಕುಮಾರ್ ರವರ ಹೆಸರಿನಲ್ಲಿದ್ದು ಅವರು ನಂತರ ದಾವಾ ಆಸ್ತಿಯ ಖಾತೆಗಳನ್ನು ತನ್ನ ಮಗನಾದ 1 ನೇ ಪ್ರತಿವಾದಿ ಹೆಸರಿಗೆ ಮಾಡಿಕೊಡುತ್ತೇನೆ ಎಂದು ಹೇಳಿರುತ್ತಾರೆ. ದಾವಾ ಆಸ್ತಿಗಳ ಮೂಲ ಪತ್ರಗಳನ್ನು ನಾನು ಪಡೆದುಕೊಂಡಿರುತ್ತೇನೆ.

ದಾವಾ ಆಸ್ತಿಗಳಿಗೆ ಸಂಬಂದಪಟ್ಟ ಮೂಲ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂಬಪ್ರಶ್ನೆಗೆ ಸಾಕ್ಷಿಯು ನನಗೆ ಬರೆದುಕೊಟ್ಟ ಕರಾರು ಪತ್ರವನ್ನು ಹಾಜರುಪಡಿಸಿರುತ್ತೇನೆ ಮತ್ತು ಬೇರೆ ದಾಖಲಾತಿಗಳನ್ನು ನನ್ನ ವಕೀಲರಿಗೆ ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ನಾನು ಖರೀದಿ ಮಾಡುವಾಗ ದಾವಾ ಆಸ್ತಿಗಳು 1 ನೇ ಪ್ರತಿವಾದಿಯ ತಂದೆಯ ಹೆಸರಿನಲ್ಲಿದ್ದ ಎಸ್ ಆರ್ ನಂ.782 ಆಗಿರುತ್ತದೆ. ಹಿಂದಿನ ಕ್ರಯ ಪತ್ರ 1979-80 ರಲ್ಲಿ ಆಗಿರುತ್ತದೆ. ಆದರೆ ಎಷ್ಟು ಮೊತ್ತಕ್ಕೆ ಆಗಿದೆ ಎಂದು ನನಗೆ ಈಗ ನೆನಪಿಲ್ಲ. ಸಾಕ್ಷಿ ಮುಂದುವರೆದು ದಾಖಲಾತಿ ನೋಡಿದರೆ ಹೇಳಬಲ್ಲೆ ಎಂದು ನುಡಿದಿರುತ್ತಾರೆ.

ಅಸೆಸ್ಮೆಂಟ್ ನಂ.1977/1 ಮತ್ತು 1914/1 ಕ್ಕೆ ಸಂಬಂದಪಟ್ಟಂತೆ ಎಷ್ಟು ವರ್ಷದ ಹಿಂದಿನ ದಾಖಲಾತಿಗಳನ್ನು ನೋಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಎಲ್ ಸಿ ರವೀಂದ್ರಕುಮಾರ್ ರವರ ಹೆಸರಿನಲ್ಲಿದ್ದ ದಾಖಲೆಗಳನ್ನು ನೋಡಿರುತ್ತೇನೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿ ಎಲ್ಲಿದೆ ಎಂದು ನಾನು ನೋಡಿರುತ್ತೇನೆ. ಅಸೆಸ್ಮೆಂಟ್ ನಂ.1977/1 ಮತ್ತು 1914/1 ರಲ್ಲಿ ಯಾರು ಯಾರು ಸ್ವಾಧೀನದಲ್ಲಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಅವು ಖಾಲಿ ನಿವೇಶನಗಳು ಎಂದು ನುಡಿದಿರುತ್ತಾರೆ.

ದಾವಾ ಆಸ್ತಿಗಳನ್ನು ಅಳತೆ ಮಾಡಿಸಲು ನಾನು ಪ್ರಯತ್ನ ಪಟ್ಟಿರುವುದಿಲ್ಲ.

ಸಾಕ್ಷಿಗೆ ದಾವಾ ಆಸ್ತಿಯ ಅಸೆಸ್ಮೆಂಟ್ ಎಕ್ಸಟ್ರಾಕ್ಟನ್ನು ತೋರಿಸಿ 8 ನಿವೇಶನಗಳಾಗಿ ವಿಂಗಡನೆಯಾಗಿರುವ ಬಗ್ಗೆ ನಮೂದಿದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿದಿರುತ್ತಾರೆ. ಅಸೆಸ್ಮೆಂಟ್ ನಂ.1977/1 ಮತ್ತು 1914/1 ಕ್ಕೆ ಸಂಬಂದಪಟ್ಟಂತೆ ನನಗೆ ಕರಾರು ಆಗಿದೆ. ನನ್ನ ಆರ್ಥಿಕ ಸಾಮರ್ಥ್ಯ ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು ನಾವು ಮೂಲತಃ ಕಾಫೀ ಬೆಳೆಗಾರರು ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿಯ ನಡವಳಿಕೆ ಹೇಗಿತ್ತೆಂದು ಹೇಳಬಹುದು ಅವರು ಚೆನ್ನಾಗಿ ಮಾತನಾಡುತ್ತಿದ್ದರು. 1 ನೇ ಪ್ರತಿವಾದಿಯ ಹೆಂಡತಿ ಮಕ್ಕಳ ಬಗ್ಗೆ ನನಗೆ ವೈಯುಕ್ತಿಕ ಮಾಹಿತಿ ಇರುವುದಿಲ್ಲ. 1 ನೇ ಪ್ರತಿವಾದಿಯ ಹೆಂಡತಿ 1 ನೇ ಪ್ರತಿವಾದಿಯ ವಿರುದ್ದ ಪೋಲೀಸರಿಗೆ ದೂರನ್ನು ನೀಡಿದ್ದರು ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲವೆಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿ ಮತ್ತು ಅವರ ತಂದೆಯನ್ನು ಹೊರತು ಪಡಿಸಿ ಅವರ ಕುಟುಂಬದಲ್ಲಿರುವವರ ಬಗ್ಗೆ ನನಗೆ ಗೊತ್ತಿಲ್ಲ.

ನಿಪಿ-3 ರ ದಾಖಲೆಯ ಪ್ರಕಾರ 8 ನಿವೇಶನಗಳಾಗಿ ವಿಂಗಡನೆ ಆಗಿದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿದಿರುತ್ತಾರೆ. ಕರಾರು ಪತ್ರಕ್ಕೆ ನನ್ನನ್ನು ಮತ್ತು 1 ನೇ ಪ್ರತಿವಾದಿಯನ್ನು ಹೊರತು ಪಡಿಸಿ 7 ಜನರು ಸಹಿ ಹಾಕಿರುತ್ತಾರೆ. ಒಪ್ಪಂದ ಕರಾರು, ಶುದ್ದ ಕರಾರು, ಕ್ರಯದ ಕರಾರಿನ ಬಗ್ಗೆ ನನಗೆ ಖುದ್ದು ಮಾಹಿತಿ ಇದೆ. ನಿಪಿ-1 ರಲ್ಲಿ ಗುರುತಿಸಿರುವ ದಾಖಲೆಗೆ ನನ್ನನ್ನು ಮತ್ತು 1 ನೇ ಪ್ರತಿವಾದಿಯನ್ನು

ಹೊರತು ಪಡಿಸಿ ದರ್ಶನ್, ನಾಗಪ್ಪಶೆಟ್ಟಿ, ಸತೀಶ್, ತ್ಯಾಗರಾಜು, ಶಿವಶಂಕರ್, ಮಂಜುನಾಥ ಮತ್ತು ಕೆ ಎಸ್ ಪ್ರಸನ್ನರವರು ಸಹಿ ಹಾಕಿರುತ್ತಾರೆ. ನಿಪಿ-1 ರ ದಾಖಲೆಗೆ ಹೆಬ್ಬೆಟ್ಟಿನ ಗುರುತನ್ನು ಸಹ ಹಾಕಿರುತ್ತಾರೆ. ಇಂದಿಗೂ ಕೂಡಾ ಎಲ್ ಸಿ ರವೀಂದ್ರ ಕುಮಾರ್ ರವರು 1 ನೇ ಪ್ರತಿವಾದಿಗೆ ಯಾವುದೇ ಪಾಲನ್ನು ಕೊಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ.

1 ನೇ ಪ್ರತಿವಾದಿ ಸಹಿಯನ್ನು ಕನ್ನಡದಲ್ಲಿ ಮಾಡುತ್ತಾರೆ ಎಂದರೆ ಸಾಕ್ಷಿಯು ಇಂಗ್ಲೀಷಿನಲ್ಲಿ ಮಾಡುತ್ತಾರೆ ಎಂದು ನುಡಿದಿರುತ್ತಾರೆ. ನಿಪಿ-7 ರಲ್ಲಿ ಗುರುತಿಸಿರುವ ದಾಖಲೆಯ ಪ್ರಕಾರ ಅಸೆಸ್ಮೆಂಟ್ ನಂ.1977/3 ಮತ್ತು 1914/3 ರ ಆಸ್ತಿಯ ಮೇಲೆ ಯಾವುದೇ ಪರಿಹಾರ ಕೇಳಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ಕರಾರುಪತ್ರ ಬರೆದು ಕೊಟ್ಟಿರುವ ಆಸ್ತಿಗೆ ಸಂಬಂದಪಟ್ಟಂತೆ ಮಾತ್ರ ಪರಿಹಾರ ಕೇಳಿರುತ್ತೇನೆ ಎಂದು ನುಡಿದಿರುತ್ತಾರೆ. ಈ ದಾವೆಯನ್ನು ಸಲ್ಲಿಸಿದ ನಂತರ 2 ರಿಂದ 4 ನೇ ಪ್ರತಿವಾದಿಗಳನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆ ಕಾರಣ 2016 ರಲ್ಲಿ ನನಗೆ ಕರಾರುಪತ್ರ ಮಾಡಿ ಕೊಟ್ಟಿದ್ದು ನಂತರ ಆಸ್ತಿಯನ್ನು 2 ರಿಂದ 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಆದ್ದರಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ. 1 ನೇ ಪ್ರತಿವಾದಿ ಮತ್ತು ಅವರ ತಂದೆ ದಿನಾಂಕ 08/02/2016 ರಂದು 2 ರಿಂದ 4 ನೇ ಪ್ರತಿವಾದಿಗೆ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ. ಅದಕ್ಕೆ ಸಂಬಂದಪಟ್ಟಂತೆ ನಾನು ಪತ್ರಗಳನ್ನು ನೋಡಿದ್ದೇನೆ. 1 ಕೋಟಿ 25 ಲಕ್ಷದ 25 ಸಾವಿರಕ್ಕೆ ಮಾರಾಟ ಆಗಿರುತ್ತದೆ.

1 ನೇ ಪ್ರತಿವಾದಿಗೆ 2005 ರಿಂದ 2013 ರವರೆಗೆ ಮದ್ಯಪಾನ ಮಾಡುವ ಅಭ್ಯಾಸ ಇದ್ದು ಅದನ್ನು ನಾನು ದುರುಪಯೋಗ

ಮಾಡಿಕೊಂಡು ಸುಳ್ಳು ದಾಖಲೆ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮತ್ತು ಅವರ ತಂದೆಗೆ ಆಸ್ತಿಯನ್ನು 2 ರಿಂದ 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೀರಾ ಎಂದು ಏಕೆ ಎಂದು ಕೇಳಿದ್ದೇನೆ. ಆದರೆ ನಿಖರವಾದ ದಿನ ಮತ್ತು ದಿನಾಂಕ ಈಗ ನೆನಪಿಲ್ಲ. ನಾನು ಈ ವಿಚಾರವಾಗಿ ನನಗೆ ನಷ್ಟವಾಗಿದೆ ಎಂದು 1 ನೇ ಪ್ರತಿವಾದಿ ಮತ್ತು ಅವರ ತಂದೆ ವಿರುದ್ಧ ಪೋಲಿಸರಿಗೆ ದೂರು ನೀಡಿರುವುದಿಲ್ಲ. 1 ನೇ ಪ್ರತಿವಾದಿ ಬಳಿ ನಾನು ನೀಡಿರುವ ಹಣವನ್ನು ವಾಪಸು ಕೊಡುವಂತೆ ಕೇಳಿರುತ್ತೀನಿ ಅದಕ್ಕೆ ಅವರು ಕರಾರುಪತ್ರವನ್ನು ನೊಂದಣಿ ಮಾಡಿಸಿಕೊಡುತ್ತೇನೆಂದು ಹೇಳಿರುತ್ತಾರೆ.

2 ರಿಂದ 4 ನೇ ಪ್ರತಿವಾದಿಗಳಿಗೆ ಆಸ್ತಿಯನ್ನು 1 ನೇ ಪ್ರತಿವಾದಿ ಮತ್ತು ಅವರ ತಂದೆ ಮಾರಾಟ ಮಾಡಿದ ನಂತರ 2 ರಿಂದ 4 ನೇ ಪ್ರತಿವಾದಿಗಳ ಬಳಿ ಹೋಗಿ ಮೊದಲೇ ಸದರಿ ಆಸ್ತಿಯನ್ನು ನನಗೆ ಮಾರಾಟ ಮಾಡಿದ್ದಾರೆ ಎಂದು ಹೇಳಿರುತ್ತೇನೆ. 1 ನೇ ಪ್ರತಿವಾದಿ ಮತ್ತು ಅವರ ತಂದೆ 2 ರಿಂದ 4 ನೇ ಪ್ರತಿವಾದಿಗಳಿಗೆ ಆಸ್ತಿಯನ್ನು ಮಾರಾಟ ಮಾಡಿದ ನಂತರ ಸ್ಥಳ ತನಿಖೆ ಮಾಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಪೂರ್ತಿ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. 2 ರಿಂದ 4 ನೇ ಪ್ರತಿವಾದಿಗಳ ಹೆಸರಿಗೆ ಯಾವ ಆಧಾರ ಮೇಲೆ ಖಾತೆ ಹೋಗಿದೆ ಎಂದು ಮುನಿಸಿಪಾಲಿಟಿಗೆ ಹೋಗಿ ವಿಚಾರಿಸಿರುತ್ತೇನೆ. ಕೇಸನ್ನು ದಾಖಲು ಮಾಡುವಾಗ ದಾಖಲಾತಿಗಳು ಬೇಕೆಂದು 2016 ರಲ್ಲಿ ಕೇಳಿರುತ್ತೇನೆ.

2009 ರಿಂದ 2013, 2013 ರಿಂದ 2016 ರವರೆಗೆ 1 ನೇ ಪ್ರತಿವಾದಿ ಮತ್ತು ಅವರ ತಂದೆಯ ಹಣಕಾಸಿನ ಪರಿಸ್ಥಿತಿ ಬಗ್ಗೆ ನಿಮಗೆ ವೈಯುಕ್ತಿಕವಾಗಿ ಗೊತ್ತಿತ್ತೆ ಎಂಬ ಪ್ರಶ್ನೆಗೆ ಸಾಕ್ಷಿಯು ಅವರಿಗೆ

ಹಣಕಾಸಿನ ತೊಂದರೆ ಇದ್ದುದರಿಂದಲೇ ನಾನು ಆಸ್ತಿ ಖರೀದಿಸಿ ಹಣ ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿಗೆ ಯಾವ ಯಾವ ಬ್ಯಾಂಕಿನಲ್ಲಿ ಖಾತೆ ಇದೆ ಎಂದು ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಗೆ 34 ಲಕ್ಷ ರೂಗಳನ್ನು ಚೆಕ್ಕು ಮೂಲಕ ಕೊಡಲು ನಿಮಗೆ ತೊಂದರೆ ಇತ್ತೆ ಎಂದರೆ ಸಾಕ್ಷಿಯು ತೊಂದರೆ ಇರಲಿಲ್ಲ ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿಯು ತನಗೆ ಹಣಕಾಸಿನ ತೊಂದರೆ ಇರುವುದರಿಂದ ನನಗೆ ಹಣವನ್ನು ನಗದು ರೂಪದಲ್ಲಿ ಕೊಡಿ ಎಂದು ಹೇಳಿದ ಕಾರಣದಿಂದಾಗಿ ನಗದು ರೂಪದಲ್ಲಿ ಕೊಟ್ಟಿರುತ್ತೇನೆ.

ಕರಾರುಪತ್ರವಾಗುವ ಪೂರ್ವದಲ್ಲಿ 1 ನೇ ಪ್ರತಿವಾದಿ ಮತ್ತು ಅವರ ತಂದೆ ತಮಗೆ ಹಣಬೇಕು ಎಂದು ನಿಮ್ಮ ಬಳಿ ಕೇಳಿದ್ದರಾ ಎಂಬ ಪ್ರಶ್ನೆಗೆ ಸಾಕ್ಷಿಯು ಅವರು ನನ್ನ ಸ್ನೇಹಿತ ಮೂಲಕ ಪರಿಚಯವಾದರು ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿಗೆ ಯಾವ ಆಧಾರದ ಮೇಲೆ 34 ಲಕ್ಷ ರೂ ಕೊಟ್ಟೀರಿ ಎಂಬ ಪ್ರಶ್ನೆಗೆ ಸಾಕ್ಷಿಯು 1 ನೇ ಪ್ರತಿವಾದಿಯ ತಂದೆ 1 ನೇ ಪ್ರತಿವಾದಿ ಈಗ ಹಣಕಾಸಿನ ತೊಂದರೆಯಲ್ಲಿದ್ದು ದಾವಾ ಆಸ್ತಿಯನ್ನು 1 ನೇ ಪ್ರತಿವಾದಿ ಹೆಸರಿಗೆ ಮಾಡಿಕೊಡುತ್ತೇನೆಂದು ಹೇಳಿದ್ದರಿಂದ ಹಣವನ್ನು ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ.

ನಿಪಿ-1 ರಲ್ಲಿ ಗುರುಸಿರುವ ದಾಖಲೆಯಲ್ಲಿ 1 ನೇ ಪ್ರತಿವಾದಿಯ ತಂದೆಯನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಮತ್ತು ಅವರ ಸಹಿಯನ್ನು ಪಡೆದಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿಯ ತಂದೆ ಆಸ್ತಿಯನ್ನು ಅವರ ಮಗನ ಹೆಸರಿಗೆ ಮಾಡಿಕೊಡುತ್ತೇನೆಂದು ಹೇಳಿದ್ದರು ಎಂದು ನುಡಿದಿರುತ್ತಾರೆ. 34 ಲಕ್ಷ ರೂಗಳನ್ನು ಕೊಟ್ಟ ಬಗ್ಗೆ 1 ನೇ ಪ್ರತಿವಾದಿ ಮತ್ತು ಅವರ ತಂದೆಯನ್ನು ಕರೆಯಿಸಿ ಪತ್ರ ಮಾಡಿಸಲು ತೊಂದರೆ ಇತ್ತ ಎಂಬ ಪ್ರಶ್ನೆಗೆ ಸಾಕ್ಷಿಯು ತೊಂದರೆ

ಇರಲಿಲ್ಲ ಮಾನವೀಯತಾ ದೃಷ್ಟಿಯಿಂದ ಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. 1 ನೇ ಪ್ರತಿವಾದಿಯ ತಂದೆ ಆಸ್ತಿಯನ್ನು ಅವರ ಮಗನ ಹೆಸರಿಗೆ ಮಾಡಿಕೊಡುತ್ತೇನೆಂದು ಹೇಳಿರಲಿಲ್ಲ ಎಂದರೆ ಸರಿಯಲ್ಲ. ದಾವೆಯನ್ನು ಹೂಡವ ಕಾಲಕ್ಕೆ ದಾವಾ ಆಸ್ತಿಯ ಖಾತೆ 1 ನೇ ಪ್ರತಿವಾದಿ ಹೆಸರಿಗೆ ಇರಲಿಲ್ಲ ಎಂದರೆ ನಿಜ.

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.